ಶಿಕ್ಷಕರ ವರ್ಗಾವಣೆ

106 (539) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರನ್ನು ಈ ಸಾಲಿನಲ್ಲಿ ವರ್ಗಾವಣೆ ಮಾಡಲಾಗಿದೆಯೇ;

ಆ) ವರ್ಗಾವಣೆ ಆದರೂ ಬಿಡುಗಡೆ ಆಗದೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು; ಈ ಶಿಕ್ಷಕರು ಇಲ್ಲಿಂದ ಬಿಡುಗಡೆ ಆಗುವವರೆಗೆ ಸದರಿ ಶಿಕ್ಷಕರ ಸ್ಥಾನಗಳನ್ನು ಕಾಯ್ದಿರಿಸಲಾಗುವುದೇ;

ಇ) ಬದಲಿ ಶಿಕ್ಷಕರ ನೇಮಕ ಯಾವಾಗ ಮಾಡಲಾಗುತ್ತದೆ;

ಈ) ಈ ವರ್ಗಾವಣೆ ಪ್ರಕ್ರಿಯೆಗಿಂತ ಮುಂಚಿನಿಂದಲೇ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಇವನ್ನು ಯಾವಾಗ ಭರ್ತಿ ಮಾಡಲಾಗುವುದು?

ಪ್ರೋ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು.

ಆ) ವರ್ಗಾವಣೆ ಆದರೂ ಬಿಡುಗಡೆ ಆಗದೇ ಇರುವ ಶಿಕ್ಷಕರ ಸಂಖ್ಯೆ ಈ ಕೆಳಗಿನಂತಿದೆ ಸದರಿ ಶಿಕ್ಷಕರ ಸ್ಥಾನವನ್ನು ಕಾಯ್ದಿರಿಸಲಾಗುವುದಿಲ್ಲ.

		ಪ್ರಾಥಮಿಕ	ಪ್ರೌಢ ಶಿಕ್ಷಣ
1.	ಹೊಸನಗರ	22	ಇಲ್ಲ
2.	ತೀರ್ಥಹಳ್ಳಿ	87	ಇಲ್ಲ

ಇ) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಬಗ್ಗೆ ತಾತ್ಕಾಲಿಕ ಪಟ್ಟಿ ಪ್ರಕಟಿಸಿದ್ದು, ಅಂತಿಮ ಆಯ್ಕೆ ಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸಿ ನೇಮಕಾತಿ ಆದೇಶಗಳನ್ನು ನೀಡಲಾಗುವುದು.

ಈ) ಈ ವರ್ಗಾವಣೆ ಪ್ರಕ್ರಿಯೆಗಿಂತ ಮುಂಚಿನಿಂದಲೇ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪ್ರಶ್ನೆ 'ಇ' ನಲ್ಲಿ ಉತ್ತರಿಸಿದೆ.

		ಪ್ರಾಥಮಿಕ	ಪ್ರೌಢ ಶಿಕ್ಷಣ
1.	ಹೊಸನಗರ	182	ಇಲ್ಲ
2.	ತೀರ್ಥಹಳ್ಳಿ	122	ಇಲ್ಲ

ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಹಾಸಿಗೆಗಳ ಸಂಖ್ಯೆಯ ಹೆಚ್ಚಳ

107 (517) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿನ ಹಾಸಿಗೆಗಳ ಸಂಖ್ಯೆಯನ್ನು 500 ಹಾಸಿಗೆಗಳ ಸಂಖ್ಯೆಗೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಈ ಪ್ರಸ್ತಾವನೆಗೆ ಅನುಮೋದನೆ ನೀಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಡ್ಯ ನಗರದಲ್ಲಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿ

110 (520) : ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳು ಯಾವುವು

ಆ) ಈ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ;

ಇ) ಹಾಗಿದ್ದಲ್ಲಿ ಕಾಮಗಾರಿಯ ವಿವರಗಳೇನು (ಪ್ರತ್ಯೇಕ ಕೊಳಚೆ ಪ್ರದೇಶಕ್ಕೆ ಅನ್ವಯ ಆಗುವಂತೆ)

ಈ) ಈ ಕಾಮಗಾರಿಗಳು ಯಾವ ಹಂತದಲ್ಲಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಮಂಡ್ಯ ನಗರದಲ್ಲಿ ಮಂಡಳಿಯ ಕಾರ್ಯಾಯಿಡಿ ಘೋಷಿತಗೊಂಡ ಒಟ್ಟು 23 ಕೊಳಚೆ ಪ್ರದೇಶಗಳಿದ್ದು, ವಿವರಗಳನ್ನು ಅನುಬಂಧ "ಅ" ನಲ್ಲಿ ನೀಡಲಾಗಿದೆ.

ಆ) ಹೌದು

ಈ ಕೆಳಕಂಡ ಅಭಿವೃದ್ಧಿ ಕಾರ್ಯಾಯಿಡಿಗಳನ್ನು ಘೋಷಿತ ಕೊಳಚೆ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ.

1. ಮೂಲಭೂತ ಸೌಕರ್ಯ ಯೋಜನೆ
2. ನಿರ್ಮಲಜ್ಯೋತಿ ಯೋಜನೆ
3. ಹುಡ್ಕೋ ವಸತಿ ಯೋಜನೆ
4. ವಾಂಬೇ ವಸತಿ ಯೋಜನೆ
5. ವಿಶೇಷ ಘಟಕ ಯೋಜನೆ
6. ನಗರ ಆಶ್ರಯ ಯೋಜನೆ
7. ನಿರ್ಮಲಭಾರತ್ ಅಭಿಯಾನ್ ಯೋಜನೆ
8. ಎ.ಡಿ.ಬಿ. ಯೋಜನೆಗಳ ಅಡಿಯಲ್ಲಿ

ಇ) 1979-90 ನೇ ಸಾಲಿನಿಂದ 2002-2003 ನೇ ಸಾಲಿನವರೆಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಶೌಚಾಲಯ, ನೆಲಹಾಸು, ಒಳಚರಂಡಿ, ಬೀದಿದೀಪ ಇತ್ಯಾದಿ ಸೌಲಭ್ಯಗಳನ್ನು ರೂ. 111.63 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒದಗಿಸಲಾಗಿದೆ.

2002-03 ನೇ ಸಾಲಿನಲ್ಲಿ ನಿರ್ಮಲಜ್ಯೋತಿ ಯೋಜನೆಯಡಿ ಮೊದಲನೇ ವರ್ಷದಲ್ಲಿ 7 ಕೊಳಚೆ ಪ್ರದೇಶಗಳಲ್ಲಿ ರಸ್ತೆ, ಅಡ್ಡಮೋರಿ, ನೆಲಹಾಸು, ಚರಂಡಿ, ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುದ್ದೀಕರಣ ಕಾಮಗಾರಿಗಳನ್ನು ರೂ. 267.57 ಲಕ್ಷ ಅಂದಾಜಿನಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಈವರೆಗೆ 153.23 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಈ ಕಾಮಗಾರಿಗಳನ್ನು 2004 ರ ಫೆಬ್ರವರಿ ಮಾಹೆಯ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

1983-84ನೇ ಸಾಲಿನಿಂದ 2002-03 ನೇ ಸಾಲಿನವರೆಗೆ ವಿವಿಧ ವಸತಿ ಯೋಜನೆಗಳಡಿ 1631 ಮನೆಗಳನ್ನು 547.41 ಲಕ್ಷ ರೂ.ಗಳ ಅಂದಾಜಿನಲ್ಲಿ ನಿರ್ಮಿಸಿ (ತಮಿಳಿಯನ್ ಕಾಲೋನಿ 146